## ಕರ್ನಾಟಕ ವಿಧಾನ ಪರಿಷತ್ತು
## (153ನೇ ಅಧಿವೇಶನ)

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 626(722) |
| ಸದಸ್ಯರ ಹೆಸರು | : | ಶ್ರೀಮತಿ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | **22.07.2024** |
| ಉತ್ತರಿಸುವವರು | : | ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿಶೇಷವಾಗಿ ಸರ್ಕಾರಿ ಭೂಮಿಗಳಲ್ಲಿ ಹಾಗೂ ರಸ್ತೆ ಬದಿಗಳಲ್ಲಿ ಹೆಚ್ಚಾಗಿ ಬೆಳೆಯುತ್ತಿರುವ ನೀಲಗಿರಿ ಹಾಗೂ ಅಕೇಶಿಯಾ ಮರಗಳಿಂದ ಅಂತರ್ಜಲ ಮಟ್ಟ ಕುಸಿಯುತ್ತಿರುವ ಬಗ್ಗೆ ಹಾಗೂ ಇಲಾಖೆಯ ವತಿಯಿಂದ ರಾಜ್ಯದಾದ್ಯಂತ ನೆಡಲಾಗುತ್ತಿರುವ ಆರೋಗ್ಯಕ್ಕೆ ಮಾರಕವಾದ "ದುಬೈಗಿಡ" ಕೊನೊಕಾರ್ಪಸ್ (Conocarpus) ಮರಗಳಿಂದ ಭೂಮಿಯನ್ನು ಅಂತರ್ಜಲ ಮಟ್ಟ ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಕೆಲವು ಸಂಶೋಧನಾ ಪ್ರಬಂಧಗಳ ಮಾಹಿತಿಯಂತೆ ನೀಲಗಿರಿ ಹಾಗೂ ಕೊನೋಕಾರ್ಪಸ್ ಮರಗಳಿಂದ ಅಂತರ್ಜಲ ಕುಸಿಯುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ) | ನೀಲಗಿರಿ ಮತ್ತು ಅಕೇಶಿಯಾ ಮರಗಳನ್ನು ಕಡಿಯಲು ಜನಸಾಮಾನ್ಯರಿಗೆ ಅವಕಾಶ ನೀಡದಿರಲು ಕಾರಣವೇನು; | ಹಿಡುವಳಿ ಪ್ರದೇಶದಲ್ಲಿ ನೀಲಗಿರಿ, ಅಕೇಶಿಯಾ ಹೈಬ್ರಿಡ್ ಮತ್ತು ಅಕೇಶಿಯಾ ಮ್ಯಾಂಜೀಯಂ ಮರಗಳನ್ನು ಕಡಿತಲೆ ಮಾಡಲು ಈಗಾಗಲೇ ವಿನಾಯಿತಿ ನೀಡಲಾಗಿದೆ ಮತ್ತು ಅಕೇಶಿಯಾ (ಅರಿಕ್ಯೂಲಿ ಪಾರ್ಜಿಸ್) ತಳಿಯ ಮರಗಳನ್ನು ಕತರಾವಣೆ ಮಾಡಲು ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ ಸೆಕ್ಷನ್ 8(3)ರಡಿಯಲ್ಲಿ 9 ಜಿಲ್ಲೆಗಳಲ್ಲಿ ಹೊರತುಪಡಿಸಿ, ಉಳಿದ ಜಿಲ್ಲೆಗಳಲ್ಲಿ ಕಡಿತಲೆ ಮಾಡಲು ಇಲಾಖೆಯ ಪೂರ್ವಾನುಮತಿ ಪಡೆಯಲು ವಿನಾಯಿತಿ ನೀಡಲಾಗಿದೆ. |
| ಇ) | ಇತ್ತೀಚೆಗೆ ಅರಣ್ಯ ಇಲಾಖೆಯು ರಸ್ತೆ ಬದಿಗಳಲ್ಲಿ ಮಾನವನ ಮತ್ತು ಜಾನುವಾರುಗಳ ಆರೋಗ್ಯಕ್ಕೆ ಮಾರಕವಾದ ವಿಷಕಾರಿ "ದುಬೈಗಿಡ"/ಕೊನೊಕಾರ್ಪಸ್ ಸಸಿಗಳನ್ನು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಸಿಗಳನ್ನು ನಿಷೇಧಿಸಿ ಇವುಗಳಿಗೆ ಪರ್ಯಾಯವಾಗಿ ಯಾವ ಸಸಿಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗುವುದು? (ವಿವರ ನೀಡುವುದು) | ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಬೆಂಗಳೂರು ಮತ್ತು ಕೆಲವು ಜಿಲ್ಲೆಗಳಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಈ ದುಬೈಗಿಡ (ಕೊನೊಕಾರ್ಪಸ್) ವನ್ನು ಬೆಳೆಯಲಾಗಿದ್ದು, ಇದರ ದುಷ್ಪರಿಣಾಮದ ಬಗ್ಗೆ ಅಭಿಪ್ರಾಯ ವ್ಯಕ್ತವಾದ ನಂತರ ಅರಣ್ಯ ಇಲಾಖೆಯಿಂದ ಈ ಪ್ರಜಾತಿಯ ಸಸ್ಯವನ್ನು ಬೆಲೆಸದೇ ಇರಲು ತಿಳುವಳಿಕೆ ನೀಡಲಾಗಿರುತ್ತದೆ. ಇದರ ಬದಲಾಗಿ ಸ್ಥಾನಿಕ ಸಸ್ಯಗಳಾದ ಬೇವು, ಆಲ, ಅರಳಿ, ಗೋಣಿ, ತಪಸಿ, ಹುಣಸೆ, ನೇರಳೆ, ಮಾವು, ಹಿಪ್ಪೆ, ಹಲಸು, ಮಹೋಗನಿ, ಸಿಸ್ಸು ಇತ್ಯಾದಿ ಜಾತಿಯ ಸಸಿಗಳನ್ನು ನೆಡಲಾಗುತ್ತಿದೆ. |

ಸಂಖ್ಯೆ: ಅಪಜೀ 30 ಎಫ್‌ಡಿಪಿ 2024

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು.